**ಸಾಕ್ಷಿಯನ್ನು ದಿಃ 13.09.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎನ್.ಎಸ್. ವಕೀಲರಿಂದಃ**

ನಾನು ಎರಡು ಐಟಂ ಆಸ್ತಿಗಳಿಗಾಗಿ ದಾವೆ ಹೂಡಿರುತ್ತೇನೆ. ದಾವಾ ಆಸ್ತಿಗಳು ಮೂಲತಃ ಸಾಬ್‌ಜಾನ್ ಸಾಬ್ ರವರಿಗೆ ಸೇರಿದ ಸ್ವತ್ತುಗಳು ಎಂದರೆ ಸರಿ. ಸಾಬ್‌ಜಾನ್ ಸಾಬ್ ರವರಿಗೆ 5 ಜನ ಮಕ್ಕಳು. ಅವರುಗಳೆಂದರೆ ಲೇಟ್ ಅಜರಾಮ್ ಬೀ, ಲೇಟ್ ಮರಿಹಾಮ್, ಲೇಟ್ ಫಾತಿಮಾ, ಲೇಟ್ ಬಾಷುಖಾನ್ (ನನ್ನ ತಂದೆ) ಮತ್ತು ಮಕ್ಬುಲ್ (1 ನೇ ಪ್ರತಿವಾದಿ). ಈ ದಾವೆಯಲ್ಲಿ 3 ಜನ ಹೆಣ್ಣು ಮಕ್ಕಳ ಮಕ್ಕಳುಗಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. ಸಾಬ್‌ಜಾನ್ ಸಾಬ್ ರವರ ಮರಣಾನಂತರ ನನ್ನ ತಂದೆಗೂ ಮತ್ತು 1 ನೇ ಪ್ರತಿವಾದಿಯ ನಡುವೆ ಮೌಖಿಕವಾಗಿ ವಿಭಾಗವಾಗಿ, ಒಂದು ಐಟಂ ಅನ್ನು ನನ್ನ ತಂದೆ ಮತ್ತು ಇನ್ನೊಂದು ಐಟಂ ಅನ್ನು 1 ನೇ ಪ್ರತಿವಾದಿ ಇಟ್ಟುಕೊಂಡರು ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್.1 ಸ್ವತ್ತು 1992–93 ರಲ್ಲಿ ಸಾಬ್‌ಜಾನ್ ಸಾಬ್ ರವರ ಮಕ್ಕಳುಗಳ ಹೇಳಿಕೆ ಮೇರೆಗೆ ಮೊದಲನೇ ಪ್ರತಿವಾದಿಯ ಹೆಸರಿಗೆ ಆಯಿತು ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ದಾವಾ ಐಟಂ ನಂಬರ್.1 ಸ್ವತ್ತಿನ ಖಾತಾ, ಆರ್.ಟಿ.ಸಿ. ಇತ್ಯಾದಿ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್.1 ಸ್ವತ್ತಿನ ಆರ್.ಟಿ.ಸಿ. ಗಳಲ್ಲಿ ಈಗಲೂ ಸಹಾ 1 ನೇ ಪ್ರತಿವಾದಿಯ ಹೆಸರು ಬರುತ್ತಿದೆ ಎಂದರೆ ಸರಿ. ಆದ್ದರಿಂದ ದಾವಾ ಐಟಂ ನಂಬರ್.1 ರ ಸ್ವತ್ತಿನ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹಾ ದಾವಾ ಐಟಂ ನಂಬರ್.1 ರ ಆಸ್ತಿಯಲ್ಲಿ 1 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದು ಉಳುಮೆ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ.

ದಾವಾ ಐಟಂ ನಂಬರ್.2 ನನ್ನ ತಂದೆಯ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್.2 ಸ್ವತ್ತನ್ನು ನನ್ನ ತಂದೆ ಜೀವಂತವಿದ್ದಾಗ, 1 ನೇ ಪ್ರತಿವಾದಿ ಮೌಖಿಕವಾಗಿ ನನ್ನ ತಂದೆಗೆ

ಬಿಟ್ಟುಕೊಟ್ಟಿದ್ದನು ಎಂದರೆ ಸರಿಯಲ್ಲ. ನಾನು ಉರ್ದುವಿನಲ್ಲಿ ಸಹಿ ಮಾಡುತ್ತೇನೆ ಎಂದರೆ ಸರಿಯಲ್ಲ. ಮೂಸಾ ಖಾನ್ ಬಿನ್ ಬಾಸು ಅಲಿಯಾಸ್ ಇಮಾಮ್ ನಾನೇ ಎಂದರೆ ಸರಿ. ಜನಾಬ್ ಮಕ್ಬುಲ್ ಕೋಂ ಅಬ್ದುಲ್ ಸುಬಾನ್ 1 ನೇ ಪ್ರತಿವಾದಿ ಎಂದರೆ ಸರಿ. ನಿ ಪಿ 15 ಅನ್ನು ನಾನು ಹಾಜರು ಪಡಿಸಿಲ್ಲ. ದಿನಾಂಕಃ29.07.1988 ರಲ್ಲಿ ನಾನು 1 ನೇ ಪ್ರತಿವಾದಿಗೆ ದಾವಾ ಐಟಂ ನಂಬರ್.2 ಸ್ವತ್ತನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ ಪಿ 15 ಅನ್ನು ಪ್ರಶ್ನಿಸಿ ನಾನು ಯಾವುದೇ ದಾವೆ ಹೂಡಿಲ್ಲ. ನಿ ಪಿ 15 ರ ಪ್ರಕಾರ ದಾವಾ ಐಟಂ ನಂಬರ್.2 ರ ಖಾತೆ 1 ನೇ ಪ್ರತಿವಾದಿಯ ಹೆಸರಿಗೆ ಬರುತ್ತಿದೆ ಎಂದರೆ ಸರಿ. 1 ನೇ ಪ್ರತಿವಾದಿ ದಾವಾ ಐಟಂ ನಂಬರ್.2 ಸ್ವತ್ತನ್ನು 2 ನೇ ಪ್ರತಿವಾದಿಗೆ ದಾನ ಪತ್ರ ಮಾಡಿಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ ದಾವಾ ಐಟಂ ನಂಬರ್.2 ಸ್ವತ್ತು 2 ನೇ ಪ್ರತಿವಾದಿಯ ಸ್ವಾಧೀನದಲ್ಲಿರುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್.1 ಸ್ವತ್ತು 1 ನೇ ಪ್ರತಿವಾದಿಯ ಭಾಗಕ್ಕೆ ಬಂದಿದ್ದು, ದಾವಾ ಐಟಂ ನಂಬರ್.2 ಸ್ವತ್ತು ನನ್ನ ತಂದೆಯ ಭಾಗಕ್ಕೆ ಬಂದಿದ್ದು ನಾನು ದಾವಾ ಐಟಂ ನಂಬರ್.2 ಸ್ವತ್ತನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇನೆ, ಹಾಗಾಗಿ ನನಗೆ ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಭಾಗ ಇಲ್ಲ ಎಂದರೆ ಸರಿಯಲ್ಲ. ನನ್ನ ತಾತನ ಮೂರು ಜನ್ನ ಹೆಣ್ಣು ಮಕ್ಕಳು ಅಂದರೆ ನನ್ನ ತಂದೆಯ ಅಕ್ಕತಂಗಿಯರ ಜೊತೆಗೆ ನನಗೆ ಯಾವುದೇ ವಿರೋಧ ಇಲ್ಲ. ನನಗೆ ಭಾಗವಿಲ್ಲದಿದ್ದರೂ, ಆಸ್ತಿಯನ್ನು ಕಬಳಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಅಜಿತ್ ದೇವರಮನಿ)**